Phone : 08282-256465
Mobile No : 9448244273
Email : kuvempuprasaranga@gmail.com

Fax 08282-256262
Website: www.kuvempu.ac.in

**ಕುವೆಂಪು ವಿಶ್ವವಿದ್ಯಾಲಯ**
**ಪ್ರಸಾರಾಂಗ**

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

## ನಿರ್ದೇಶಕರು

ಸಂಖ್ಯೆ:ಕುವಿ:ಪ್ರಸಾರಾಂಗ::2023/03/ ದಿನಾಂಕ:05-05-2023

# ಅಧಿಕೃತ ಜ್ಞಾಪನಾ

ವಿಷಯ : ಪ್ರಸಾರಾಂಗದಿಂದ ಪ್ರಕಟವಾಗುವ ಪುಸ್ತಕಗಳ/ಕೃತಿಗಳಿಗೆ ಹಾಗೂ ನಿಯತಕಾಲಿಕೆಗಳಿಗೆ ಹಸ್ತಪ್ರತಿ ತಯಾರಿಕೆಯ ಹಂತದಿಂದ ಪ್ರಕಟಣೆಯ ಹಂತದವರೆಗೆ ಸೂಕ್ತ ಸಂಭಾವನೆಗಳನ್ನು ನಿಗದಿಪಡಿಸುವ ಕುರಿತು.

ಉಲ್ಲೇಖ : 1. ದಿ:13-12-02023ರ ಪ್ರಸಾರಾಂಗದ ಸಲಹಾ ಸಮಿತಿ ಸಭೆಯ ನಡಾವಳಿ ವಿಷಯ ಸಂಖ್ಯೆ:(10)ಮೇಲಿನ ನಿರ್ಣಯ.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 02-05-2023.

**ಪ್ರಸ್ತಾವನೆ:**

ಕುವೆಂಪು ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಪ್ರಕಟವಾಗುವ ವಿವಿಧ ರೀತಿಯ **ಪುಸ್ತಕಗಳ/ಕೃತಿಗಳಿಗೆ ಹಾಗೂ ನಿಯತಕಾಲಿಕೆಗಳಿಗೆ** ಅವುಗಳ **ಹಸ್ತಪ್ರತಿ ತಯಾರಿಕೆಯ ಹಂತದಿಂದ ಪ್ರಕಟಣೆಯ ಹಂತದವರೆಗಿನ** ವಿವಿಧ ಹಂತದವರೆಗೆ ಸೂಕ್ತ ದರಗಳ ಸಂಭಾವನೆಗಳನ್ನು ನಿಗದಿಪಡಿಸುವ ಅವಶ್ಯಕತೆಯಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಕೆಲವು ಹಂತಗಳನ್ನು ಗುರುತಿಸಿ ಅವುಗಳಿಗೆ ಸೂಕ್ತ ದರಗಳನ್ನು ನಿಗದಿಪಡಿಸಲಾಗಿದೆ.

| ಕ್ರಮ ಸಂಖ್ಯೆ | ವಿವರ | ಸಂಭಾವನೆಯ ಮೊಬಲಗು | | |
|---|---|---|---|---|
| | **ಪುಸ್ತಕಗಳ ಹಸ್ತಪ್ರತಿ ತಯಾರಿಕೆಯ ವೆಚ್ಚ** | ಕ್ರೌನ್ 1/8 ಅಳತೆ | ಡೆಮಿ 1/8 ಅಳತೆ | ಎ4 ಅಳತೆ |
| I | **ಡಿ.ಟಿ.ಪಿ ವೆಚ್ಚ**<br>ಕನ್ನಡ ಭಾಷೆಯ ನುಡಿ (ಒಣಜು-01) ಫಾಂಟ್ ಸೈಜ್ 12 ಹಾಗೂ ಇಂಗ್ಲೀಷ್ ಭಾಷೆಯ, Times New Roman, ಫಾಂಟ್ ಸೈಜ್ 13ರಲ್ಲಿ ಏಕಸಾಲಿನ ಸ್ಥಳಾವಕಾಶದ (Single line space) ಒಂದು ಪುಟದ ಡಿ.ಟಿ.ಪಿ ವೆಚ್ಚ | ರೂ. 20/- | ರೂ. 25/- | ರೂ. 30/- |
| II | **II.1ತಿದ್ದುಪಡಿಗಾಗಿ ನೀಡುವ ಹಸ್ತಪ್ರತಿಗಳ ಮುದ್ರಣ ವೆಚ್ಚ (ಮೂರು ಹಂತದಲ್ಲಿ)**<br>**ಒಂದು ಪುಟಕ್ಕೆ** | ರೂ. 1/- | | |
| | **II.2 ಹಸ್ತಪ್ರತಿಗಳ ಪರಿಶೀಲನೆ/ಕರಡು ತಿದ್ದುಪಡಿ:**<br>ವಿಶ್ವವಿದ್ಯಾಲಯದ ಪ್ರಸಾರಾಂಗವು ಮುದ್ರಿತ ಹಸ್ತಪ್ರತಿಗಳ ಪರೀಶೀಲನೆ ಹಾಗೂ ತಿದ್ದುಪಡಿಗೆ ಅಧಿಕೃತವಾಗಿ ಗುರುತಿಸಿ ಧೃಢೀಕರಿಸುವ ಮೂಲ ಹಸ್ತಪ್ರತಿ ತಯಾರಕರಿಗೆ ಅಥವಾ ನಿಯೋಜಿತ ಹಸ್ತಪ್ರತಿ/ಕರಡು ತಿದ್ದುಪಡಿಗಾರರಿಗೆ: | ರೂ. 5/- | ರೂ. 10/- | ರೂ. 15/- |

| | | |
|---|---|---|
| III | **ಮುಖಪುಟ ವಿನ್ಯಾಸಕಾರರಿಗೆ:** ಒಂದು ಕೃತಿಗೆ | ರೂ. 2,000/– |
| IV | **ಕೃತಿಗಳ ಲೇಖಕರಿಗೆ ಗೌರವ ಸಂಭಾವನೆ:** ಒಂದು ಪುಟಕ್ಕೆ | ರೂ. 150/– |
| V | **ಸಂಪಾದಿತ ಕೃತಿಗಳ/ಪ್ರತಿ ಲೇಖನಕ್ಕೆ ನೀಡಬೇಕಾದ ಗೌರವ ಧನ**<br>1000 ಪದಗಳು ಮತ್ತು ಅದಕ್ಕಿಂತ ಹೆಚ್ಚು ಪದಗಳಿಗೆ | ರೂ. 1,000/– |
| VI | **ಪಠ್ಯಪುಸ್ತಕಗಳು:**<br>**VI.1** ಸ್ವತಂತ್ರ್ಯ ಪಠ್ಯ ಕೃತಿಗೆ **DTP Charges** : ಮುದ್ರಿತ ಒಂದು ಪುಟಕ್ಕೆ<br>**VI.2** ಪ್ರಕಟಿತ ಸಂಪಾದಿತ ಪಠ್ಯ ಕೃತಿಗೆ ಒಬ್ಬರಿಗಿಂತಹೆಚ್ಚು ಲೇಖಕರು/ಸಂಪಾಕರುಗಳು ಇದ್ದಲ್ಲಿ ಎಲ್ಲರಿಗೂ ಹಂಚಿದಂತೆ ಕ್ರೋಢೀಕೃತ ಸಂಭಾವನೆ. | Rs. 25/- per page<br>Rs.20/- per page |
| VII | **ನಿಯತಕಾಲಿಕೆಗಳು:**<br>ಒಬ್ಬರಿಗಿಂತ ಹೆಚ್ಚು ಸಂಪಾದಕರಾದಲ್ಲಿ, ಎಲ್ಲರಿಗೂ ಸಮನಾಗಿ ಹಂಚಿದಂತೆ ಒಟ್ಟು ಕ್ರೋಢೀಕೃತ ಸಂಭಾವನೆ ಒಂದು ಪುಟಕ್ಕೆ (ಕನಿಷ್ಠ 100 ಪುಟ)<br>(both print and online versions) | ರೂ. 2,000/– per issue |

**ಟಿಪ್ಪಣಿ:–** 1. ಮೇಲೆ ತಿಳಿಸಿದ ಸಂಭಾವನೆ ದರಗಳು ಮೊದಲ ಆವೃತ್ತಿಯ 1000 ಪ್ರತಿಗಳವರೆಗಿನ ಪ್ರಕಟಣೆಗೆ ಮಾತ್ರ ಅನ್ವಯಿಸುತ್ತದೆ. ಎರಡನೆಯ ಆವೃತ್ತಿಯ 1000 ಪ್ರತಿಗಳ ಪ್ರಕಟಣೆಗೆ ಮೇಲಿನ ದರಗಳ ಅರ್ಧದಷ್ಟು ಹಾಗೂ ಮುಂದಿನ ಆವೃತ್ತಿಗಳಿಗೆ ಅನ್ವಯವಾಗುವುದಿಲ್ಲ. ಲೇಖಕರು ಇಚ್ಛಿಸಿದ್ದಲ್ಲಿ ಸಂಭಾವನೆಯ ಸ್ಥಾನದಲ್ಲಿ ಅದರ ಮೊಬಲಗಿನ ತತ್ಸಮಾನ ಸಂಖ್ಯೆಯಲ್ಲಿ ಪುಸ್ತುಕಗಳನ್ನು ಪಡೆಯಬಹುದು.

2. ಪ್ರಸಾರಾಂಗವು ಮರುಮುದ್ರಣ ಮಾಡುವಾಗ ಲೇಖಕರನ್ನು, ಅವರುಗಳು ರಚಿಸಿದ ಪುಸ್ತಕ/ಕೃತಿ/ಗ್ರಂಥಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಪರಿಷ್ಕರಿಸುವಂತೆ ಕೋರಿದಾಗ ಲೇಖಕರು ಹಾಗೆ ಪರಿಷ್ಕರಿಸಿಕೊಡಲು ಬದ್ಧರಾಗಿರುತ್ತಾರೆ.

ಮೇಲ್ಕಂಡ ತಃಖ್ತೆಯನ್ವಯ **ಪುಸ್ತಕಗಳ/ಕೃತಿಗಳಿಗೆ ಹಾಗೂ ನಿಯತಕಾಲಿಕೆಗಳ ಹಸ್ತಪ್ರತಿ ತಯಾರಿಕೆಯ ಹಂತದಿಂದ ಪ್ರಕಟಣೆಯ ವಿವಿಧ ಹಂತದವರೆಗಿನ** ಕಾರ್ಯಗಳಿಗೆ ಸಂಭಾವನೆಗಳನ್ನು ಪಾವತಿಸಲು ಹಾಗೂ ಸದರಿ ದರಗಳನ್ನು ಪ್ರತಿ ಆರ್ಥಿಕ ವರ್ಷದಲ್ಲಿ, ಪರಿಷ್ಕರಣೆಯ ಅಗತ್ಯ ಕಂಡುಬಂದಲ್ಲಿ, ಪರಿಷ್ಕೃತ ದರಗಳಿಗೆ ಪ್ರಸಾರಾಂಗದ ಸಲಹಾ ಸಮಿತಿ ಸಭೆಯ ಒಪ್ಪಿಗೆ ಪಡೆದು, ಸಂಬಂಧಿತ ವೆಚ್ಚಗಳನ್ನು ವಿಶ್ವವಿದ್ಯಾಲಯ ಆಯ-ವ್ಯಯದ **ಪ್ರಸಾರಾಂಗದ ಪ್ರಕಟಣೆಗಳು/ಅರಿವು ಕಾರ್ಯಕ್ರಮದ ಶೀರ್ಷಿಕೆಯಡಿ** ಭರಿಸಿ ಪಾವತಿಸಲು ಉಲ್ಲೇಖದಲ್ಲಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಕುವಿ:ಪ್ರಸಾರಾಂಗ:/2023/03/ ದಿನಾಂಕ:05/05/2023**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ ಪ್ರತಿ ಆರ್ಥಿಕ ವರ್ಷದಲ್ಲಿ ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಪ್ರಕಟವಾಗುವ ವಿವಿಧ ರೀತಿಯ **ಪುಸ್ತಕಗಳ/ಕೃತಿಗಳಿಗೆ ಹಾಗೂ ನಿಯತಕಾಲಿಕೆಗಳಿಗೆ ಹಸ್ತಪ್ರತಿ ತಯಾರಿಕೆಯ ಹಂತದಿಂದ ಪ್ರಕಟಣೆಯ ಹಂತದವರೆಗಿನ** ವಿವಿಧ ಹಂತಗಳ ಕಾರ್ಯಗಳಿಗೆ ಮೇಲ್ಕಂಡ ಪ್ರಸ್ತಾವನೆಯ ಕೋಷ್ಟಕದಲ್ಲಿ ನಮೂದಿಸಲಾದ ದರಗಳನ್ವಯ, ಸೂಕ್ತ ಸಂಭಾವನೆಗಳನ್ನು ನಿಗದಿಪಡಿಸುವ ಹಾಗೂ ಸದರಿ ದರದಲ್ಲಿಯೇ ಅಥವಾ ಪ್ರತಿ ಆರ್ಥಿಕ ವರ್ಷದಲ್ಲಿ ಪ್ರಸಾರಾಂಗದ ಸಲಹಾ ಸಮಿತಿ ಸಭೆಯು ಕಾಲಕ್ಕನುಗುಣವಾಗಿ ಪರಿಷ್ಕರಣೆಯ ಅಗತ್ಯ ಕಂಡುಬಂದಲ್ಲಿ ಪರಿಷ್ಕರಿಸುವ ದರಗಳಂತೆ, ಹಾಗು ಇದಕ್ಕೆ ತಗಲುವ ವೆಚ್ಚಗಳನ್ನು ವಿಶ್ವವಿದ್ಯಾಲಯದ ಪ್ರತಿ ಆರ್ಥಿಕ ವರ್ಷದ ಆಯ-ವ್ಯಯದ **ಪ್ರಸಾರಾಂಗದ ಪ್ರಕಟಣೆಗಳು/ಅರಿವು ಕಾರ್ಯಕ್ರಮದ ಶೀರ್ಷಿಕೆಯಡಿ** ಭರಿಸಿ ಪಾವತಿಸಲು ಮಂಜೂರಾತಿಗಳನ್ನು ನೀಡಲಾಗಿದೆ.

ಕರಡು ಕುಲಸಚಿವರಿಂದ
ಅನುಮೋದಿತವಾಗಿದೆ

ನಿರ್ದೇಶಕರು
ನಿರ್ದೇಶಕರು
ಪ್ರಸಾರಾಂಗ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ.

ಗೆ,

1. ಕುಲಸಚಿವರು (ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ
2. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ
3. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ
4. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
5. ಸಹ್ಯಾದ್ರಿ ವಿಜ್ಞಾನ/ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜುಗಳ ಪ್ರಾಚಾರ್ಯರುಗಳಿಗೆ, ಶಿವಮೊಗ್ಗ.
6. ಪ್ರಾಂಶುಪಾಲರು, ಯು.ಎಸ್.ಎಂ.ಆರ್. ಪ್ರಥಮ ದರ್ಜೆ ಕಾಲೇಜು, ಶಂಕರಘಟ್ಟ
7. ನಿರ್ದೇಶಕರು-ವಿದ್ಯಾರ್ಥಿ ಕ್ಷೇಮಪಾಲನೆ/ದೂರ ಶಿಕ್ಷಣ ನಿರ್ದೇಶನಾಲಯ/ಕಾಲೇಜು ಅಭಿವೃದ್ಧಿ ಪರಿಷತ್ತು/ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ/ಅಂಬೇಡ್ಕರ್ ಅಧ್ಯಯನ ಕೇಂದ್ರ, / ಯು.ಸಿ.ಸಿ.ಎಫ್ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
8. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಬಿ.ಹೆಚ್. ರಸ್ತೆ, ಕಡೂರು.
9. ಕಾರ್ಯಪಾಲಕ ಅಭಿಯಂತರರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
10. ಎಲ್ಲಾ ಉಪಕುಲಸಚಿವರಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
11. ಎಲ್ಲಾ ಸಹಾಯ ಕುಲಸಚಿವರು/ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
12. ಸಂಯೋಜನಾಧಿಕಾರಿಗಳು, ಐ.ಕ್ಯೂ.ಎ.ಸಿ/ಮಹಿಳಾ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
13. ಶಿಕ್ಷಕ ಸಲಹೆಗಾರರು, ಸ್ನಾತಕೋತ್ತರ ಪುರುಷರ:ಮಹಿಳಾ ವಿದ್ಯಾರ್ಥಿಗಳ ನಿಲಯ ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
14. ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನಾ ವಿಭಾಗ, ನಗರ ಕಛೇರಿ ಬೈಪಾಸ್ ರಸ್ತೆ, ಶಿವಮೊಗ್ಗ.
15. ಸಂಚಾಲಕರು, ಪಠ್ಯೇತರ ಚಟುವಟಿಕೆ ವಿಭಾಗ, ಎಸ್.ಸಿ/ಎಸ್.ಟಿ. ಸೆಲ್/ ಓ.ಬಿ.ಸಿ./ಅಂಬೇಡ್ಕರ್ ಅಧ್ಯಯನ ಪೀಠ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
16. ಆಪ್ತ ಕಾರ್ಯಾಲಯ:ಕುಲಪತಿಗಳು, ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
17. ಕ್ಯೂರೇಟರ್, ಕೆಳದಿ ವಸ್ತು ಸಂಗ್ರಹಾಲಯ, ಕೆಳದಿ, ಸಾಗರ
18. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
19. ಕಛೇರಿ ಪ್ರತಿ